## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು 560002**

ಸಂಖ್ಯೆ: ಆ/ಪಿಐಸ್‌ಆರ್/ ಆ-953 /16-17 ದಿನಾಂಕ: 07-05-2016

# ಅಧಿಸೂಚನೆ

**ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡ ಅವಶೇಷಗಳಂತಹ ಅನುಪಯುಕ್ತ ಸಾಮಗ್ರಿಗಳನ್ನು ಹಾಗೂ ಕಟ್ಟಡ ನಿರ್ಮಾಣಕ್ಕೆ ಅಗೆಯುವ ಮಣ್ಣನ್ನು ವಿಲೇವಾರಿ ಮಾಡುವ ಬಗ್ಗೆ.**

- ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆ ವ್ಯಾಪ್ತಿಯಲ್ಲಿ ಬೃಹತ್ ಸಮುಚ್ಛಯಗಳು, ವಾಣಿಜ್ಯ ಕಟ್ಟಡಗಳು, ನಿವಾಸಗಳಿಂದ ಉತ್ಪತ್ತಿಯಾಗುವ ಅನುಪಯುಕ್ತ ಸಾಮಗ್ರಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆ ಬದಿಗಲ್ಲಿ ಅಕ್ರಮವಾಗಿ ವಿಲೇವಾರಿ ಮಾಡುತ್ತಿರುವುದು ಗಮನಕ್ಕೆ ಬಂದಿದೆ.
- ಈ ಅಕ್ರಮ ವಿಲೇವಾರಿಯಿಂದ ನಗರದ ಸೌಂದರ್ಯ ಹಾಳಾಗುವುದರ ಜೊತೆಗೆ ನಾಗರಿಕರ ಓಡಾಟಕ್ಕೆ, ವಾಹನ ಸಂಚಾರಕ್ಕೆ ಮತ್ತು ಚರಂಡಿಗಳಲ್ಲಿ ಸರಾಗವಾಗಿ ಹರಿಯುವ ನೀರಿಗೆ ಅಡ್ಡಿಯಾಗುತ್ತಿದ್ದು, ಇದರಿಂದ ರಸ್ತೆಗಳಲ್ಲಿ ಗುಂಡಿಗಳಾಗುತ್ತಿವೆ.
- ಈ ರೀತಿ ಅನಧಿಕೃತವಾಗಿ ರಾತ್ರಿಯ ವೇಳೆ ಯಾರಿಗೂ ತಿಳಿಯದಂತೆ ಕಸ ಹಾಗೂ ಮತ್ತಿತರ ಅನುಪಯುಕ್ತ ಸಾಮಗ್ರಿಗಳನ್ನು ಎಲ್ಲೆಂದರಲ್ಲಿ ಸುರಿಯುತ್ತಿರುವುದನ್ನು ಪಾಲಿಕೆಯು ತೀವ್ರವಾಗಿ ಖಂಡಿಸುತ್ತದೆ.
- ವಿಶೇಷವಾಗಿ ಸಾರ್ವಜನಿಕ ಸ್ಥಳಗಳಾದ ರಸ್ತೆ ಬದಿಗಳು, ಪಾದಚಾರಿ ರಸ್ತೆ, ಆಟದ ಮೈದಾನ, ಖಾಲಿ ನಿವೇಶನಗಳು, ಉದ್ಯಾನವನ ಮತ್ತು ಸರ್ಕಾರಿ ಜಾಗಗಳಲ್ಲಿ ಅಕ್ರಮ ತ್ಯಾಜ್ಯ ವಿಲೇವಾರಿಯನ್ನು ನಿಷೇಧಿಸಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಪಾಲಿಕೆಯು ಕಠಿಣ ಕ್ರಮ ಕೈಗೊಳ್ಳುವ ಕುರಿತು ದೃಢ ನಿರ್ಧಾರ ತೆಗೆದುಕೊಂಡಿದೆ.
- ರಾತ್ರಿ ವೇಳೆಯ ಅಕ್ರಮ ವಿಲೇವಾರಿಯನ್ನು ತಡೆಯುವ ನಿಟ್ಟಿನಲ್ಲಿ ಪ್ರಹರಿ ವಿಲೇವಾರಿ ವಾಹನದ ಜೊತೆಗೆ ಆಯಾ ವಲಯಗಳಲ್ಲಿ ಕಂದಾಯ/ಆರೋಗ್ಯ/ಕಾಮಗಾರಿ ವಿಭಾಗಗಳನ್ನೊಳಗೊಂಡ ಹಿರಿಯ ಅಧಿಕಾರಿಗಳ ನೇತೃತ್ವದ ವಿಶೇಷ ತಂಡವೊಂದನ್ನು ರಚಿಸಲಾಗಿರುತ್ತದೆ.
- ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 (ಕೆ.ಎಂ.ಸಿ ಕಾಯ್ದೆ) ನಿಯಮ 436-ಎ ಮತ್ತು 441ರ ಪ್ರಕಾರ ರೂ. 5000/- ದಂಡ ವಿಧಿಸಲ್ಪಡುವುದು ಹಾಗೂ ಇದಕ್ಕೆ ಬಳಸಿದ ವಾಹನಗಳನ್ನು ಒಂದು ತಿಂಗಳ ಅವಧಿಗೆ ಪಾಲಿಕೆ ವಶಕ್ಕೆ ತೆಗೆದುಕೊಳ್ಳಲಾಗುವುದು.
- ಈ ಕುರಿತಂತೆ ಈಗಾಗಲೇ ದಿನಾಂಕ: 05-07-2012 ರಂದು ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಸಾರ್ವಜನಿಕ ಪ್ರಕಟಣೆಯನ್ನು ಮಾರ್ಪಡಿಸಿ ಈ ಕೆಳಕಂಡ ಪ್ರದೇಶಗಳಲ್ಲಿ ಕಟ್ಟಡ ಭಗ್ನಾವಶೇಷಗಳು ಇತ್ಯಾದಿಗಳನ್ನು ವಿಲೇವಾರಿ ಮಾಡಲು ಅವಕಾಶ ಕಲ್ಪಿಸಲಾಗುತ್ತಿದೆ.
- ಕಟ್ಟಡ ಮಾಲೀಕರು, ಗುತ್ತಿಗೆದಾರರು ಮತ್ತು ಸಾರ್ವಜನಿಕರು, ಕಟ್ಟಡ ಅವಶೇಷಗಳು ಮತ್ತು ಇತರೆ ತ್ಯಾಜ್ಯಗಳನ್ನು ಸುರಿಯಲು ಕೆಳಕಂಡ ನಿಗದಿತ ಸ್ಥಳಗಳನ್ನು ಗುರುತಿಸಲಾಗಿದ್ದು, ಸದರಿ ಸ್ಥಳಗಳಲೇ ವಿಲೇವಾರಿ ಮಾಡಲು ಈ ಮೂಲಕ ಸೂಚಿಸಲಾಗಿದೆ.

| ನಿಗದಿಮಾಡಿರುವ ಕಲ್ಲು ಗಣಿಯಿರುವ ಪ್ರದೇಶ | ಸರ್ವೆ ನಂ. | ವಿಸ್ತೀರ್ಣ ಎಕರೆಗಳಲ್ಲಿ |
|---|---|---|
| ಕಾಡು ಅಗ್ರಹಾರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು | 34 | 18–04 |
| ಕಣ್ಣೂರು ಗ್ರಾಮ, ಬಿದರಹಳ್ಳಿ, ಬೆಂಗಳೂರು ಪೂರ್ವ ತಾಲ್ಲೂಕು | 50 | 50–00 |
| ಮಿಟ್ಟಗಾನಹಳ್ಳಿ ಗ್ರಾಮ, ಬಿದರಹಳ್ಳಿ, ಬೆಂಗಳೂರು ಪೂರ್ವ ತಾಲ್ಲೂಕು. | 2 | 10–00 |

12/5/20

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ